# ಜೀವವಿಜ್ಞಾನಿ ಡಾ॥ ಕೆ.ಎಸ್.ಲವಪ್ಪನವರು



ಗ್ರಾಮೀಣ ಪ್ರದೇಶದಲ್ಲಿ ಜನಿಸಿ, ತಮ್ಮ ವಿಶೇಷ ಸಂಶೋಧನೆಯ ಮೂಲಕ ವಿಶ್ವವಿಖ್ಯಾತ ವಿಜ್ಞಾನಿಗಳ ಸಾಲಿಗೆ ಸೇರಿದ ಮಹಾನ್ ಪ್ರತಿಭಾವಂತರಾದ ಇವರು ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಕಾಂತರಾಜಪುರದ ಶ್ರೀಮತಿ ಸುಬ್ಬಮ್ಮ ಮತ್ತು ಶ್ರೀ ಸುಬ್ಬೇಗೌಡರ ಕಡುಬಡ ಕುಟುಂಬದಲ್ಲಿ ತೃತೀಯ ಮಗನಾಗಿ ದಿನಾಂಕ: 8-3-1938 ರಲ್ಲಿ ಜನನ. ಇವರ ಮೊದಲಿನ ಹೆಸರು ಲಕ್ಕಪ್ಪ. ಲವಲವಿಕೆ ಮತ್ತು ಚುರುಕು ಸ್ವಭಾವದಿಂದಾಗಿ ಇವರು ಶಾಲೆ ಸೇರುವ ವೇಳೆಗೆ ಇವರ ಹೆಸರು ಲವಪ್ಪ ಎಂದಾಯಿತು.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು 1944-1952 ರವರೆಗೆ ಮತ್ತು ಪ್ರೌಢಶಿಕ್ಷಣವನ್ನು 1952-1955 ರವರೆಗೆ ಸ್ವಗ್ರಾಮದಲ್ಲೇ ಪಡೆದರು. 1955-56 ರಲ್ಲಿ ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಇಂಟರ್ ಮಿಡಿಯೇಟ್ ವ್ಯಾಸಂಗ ಮಾಡಿದರು. ಈ ಸಂದರ್ಭದಲ್ಲಿ ಮೈಸೂರಿನ ಕೆ.ಹೆಚ್.ರಾಮಯ್ಯ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೊಂದಿದ್ದರು. 1956 ರಲ್ಲಿ ಬಿ.ಎಸ್ಸಿ.(ಆನರ್ಸ್) ಪದವಿ ವ್ಯಾಸಂಗಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದರು. ಈ ಸಂದರ್ಭದಲ್ಲಿ ಬೆಂಗಳೂರಿನ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು 1959 ರಲ್ಲಿ ಬಿ.ಎಸ್ಸಿ.(ಆನರ್ಸ್) ಪಡೆದರು. ಇದೇ ಕಾಲೇಜಿನಲ್ಲಿ ಎಂ.ಎಸ್ಸಿ.(ಜೀವವಿಜ್ಞಾನ) ಸ್ನಾತಕೋತ್ತರ ಪದವಿಗೆ ಸೇರಿದ್ದು, ಇವರ ಜೀವನದ ದಿಕ್ಕನ್ನೆ ಬದಲಿಸಿತು. ಶ್ರದ್ಧೆ ಮತ್ತು ಪರಿಶ್ರಮದಿಂದ ಅಧ್ಯಯನ ಮಾಡಿ, ಎಂ.ಎಸ್ಸಿ.ಯಲ್ಲಿ ಪ್ರಥಮ ರ್‍ಯಾಂಕ್, ಪಡೆದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಛಾಪು ಮೂಡಿಸಿದರು.

ನಂತರ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಏರ್ಪಾಡಾಗುತ್ತಿದ್ದ ಪ್ರಚಾರ ಉಪನ್ಯಾಸಗಳನ್ನು ನೀಡುತ್ತಿದ್ದರು. ಇದೇ ಅವಧಿಯಲ್ಲಿ ಮಿನಿಸ್ಟರಿ ಆಫ್ ಸೈಂಟಿಫಿಕ್ ರೀಸರ್ಚ್ ಅಂಡ್ ಕಲ್ಚರಲ್ ಅಫೈರ್ ನವರು ಸೈಂಟಿಸ್ಟ್ ಸೈಂಟ್‌ಪೂಲ್‌ನಲ್ಲಿ ಬಾರತೀಯ ವಿಜ್ಞಾನಿಯಾಗಿ ಕೆಲಸ ಮಾಡಲು ಆಯ್ಕೆ ಮಾಡಿದರು. ಈ ಮೂಲಕ ಸಿ.ಎಸ್.ಐ.ಆರ್.ನಲ್ಲಿ ಆಫೀಸರ್ ಆಗಿ ಕೆಲಸ ಮಾಡಲು ಅವಕಾಶ ದೊರೆಯಿತು. ಈ ಹುದ್ದೆಯಲ್ಲಿ ಸುಮಾರು ಒಂದೂವರೆ ವರ್ಷಗಳ ಕಾಲ ಸೇವೆಸಲ್ಲಿಸಿದ್ದರು. ಬಾಲ್ಯದಿಂದಲೂ ಅಧ್ಯಯನ ಮತ್ತು ಸಂಶೋಧನೆಗಳಲ್ಲಿ ಆಸಕ್ತಿಯಿದ್ದ ಇವರು 1963ರಲ್ಲಿ ಪಿ.ಹೆಚ್.ಡಿ.ಪದವಿ ಪಡೆಯಲು ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರಕ್ಕೆ ಪ್ರವೇಶ ಪಡೆದರು. ಇಲ್ಲಿ ಪ್ರಾಣಿಶಾಸ್ತ್ರ ಮತ್ತು ಬಯೋಕೆಮಿಸ್ಟ್ರಿ ವಿಷಯಗಳಲ್ಲಿ ಅಧ್ಯಯನ

ಕೈಗೊಂಡರು. ಮುಂದೆ ಅಮೇರಿಕಾದ ಓಹಿಯೋದ ಸಿನ್ಸಿನಾಟಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಅಧ್ಯಯನ ಮತ್ತು ಸಂಶೋಧನೆಗಾಗಿ ಅಕ್ಟೋಬರ್ 1964 ರಲ್ಲಿ ಅಮೇರಿಕಾಕ್ಕೆ ಪ್ರಯಾಣ ಬೆಳೆಸಿ, ಕಾಂತರಾಜಪುರದ ಹೆಸರನ್ನು ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಬೆಳಗಿಸಿದರು. ಕಾಂತರಾಜಪುರದ ಜನತೆ ಈಗಿರುವ ಗ್ರಾಮಪಂಚಾಯಿತಿ ಕಾರ್ಯಾಲಯವಿರುವ ಭವನದಲ್ಲಿ ಸನ್ಮಾನ ಸಮಾರಂಭವೇರ್ಪಡಿಸಿ ಆತ್ಮೀಯವಾಗಿ ಬೀಳ್ಕೊಟ್ಟಿದ್ದರು.

### ಅಮೇರಿಕಾದಲ್ಲಿ ಮುಖ್ಯವಾಗಿ ನಿರ್ವಹಿಸಿದ ಕೆಲವು ಸಂಶೋಧನಾ ಕಾರ್ಯಗಳು:

1. ಅಮೇರಿಕಾದ ಮೆಸಾಚುಸೆಟ್ಸ್ ಚೆಸ್‌ನ ಬಾಸ್ಟಿನ್ ನಗರದಲ್ಲಿ ಮಕ್ಕಳ ಕ್ಯಾನ್ಸರ್ ಸಂಶೋಧನಾ ಪ್ರಾಜೆಕ್ಟ್‌ನಲ್ಲಿ ಸಂಶೋಧನಾ ಕಾರ್ಯವನ್ನು 1965-68ರವರೆಗೆ ಕೈಗೊಂಡಿದ್ದರು.
2. 1968-70ರವರೆಗೆ ಲ್ಯಾಬ್ ಸೈಟೋಜೆನೆಟಿಕ್ಸ್
3. 1970-72ರವರೆಗೆ ರಿಸರ್ಚ್ ಅಸಿಸ್ಟೆಂಟ್ ಚಿಲ್ಡ್ರನ್ಸ್ ಪೆಥಾಲಜಿ, ಬಾಸ್ಟನ್
4. 1972-74ರವರೆಗೆ ಕೇಸ್ ವೆಸ್ಟರ್ನ್ ರಿಸರ್ಚ್ ಯುನಿವರ್ಸಿಟಿಯಲ್ಲಿ ಫಾರ್ಮಾಕಾಲ್ ಅಸಿಸ್ಟೆಂಟ್ ಪ್ರೊಫೆಸರ್
5. 1975ರ ನಂತರ ರಾಕ್‌ವಿಲ್‌ನ ಅಮೇರಿಕನ್ ಟೈಪ್ ಕಲ್ಚರ್ ಕಲೆಕ್ಷನ್ ಸಂಸ್ಥೆಯಲ್ಲಿ ವಿಜ್ಞಾನ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಇವುಗಳ ಜೊತೆಗೆ ಅಮೇರಿಕಾದ ಹಲವಾರು ವೈಜ್ಞಾನಿಕ ಕಮಿಟಿಗಳಲ್ಲಿ, ಸಂಸ್ಥೆಗಳಲ್ಲಿ ಟ್ರಸ್ಟಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವುಗಳಲ್ಲಿ ಮುಖ್ಯವಾದವು-

1. ಟಿಸ್ಯೂಕಲ್ಚರ್ ಅಸೋಸಿಯೇಷನ್
2. ಸೊಸೈಟಿ ಆಫ್ ಪ್ರೋಟೋಜುಯೋಲಜಿಸ್ಟ್
3. ಜನೆಟಿಕ್ ಸೊಸೈಟಿ ಆಫ್ ಅಮೇರಿಕ
4. ಅಮೇರಿಕನ್ ಸೊಸೈಟಿ ಫಾರ್ ಮೈಕ್ರೋ ಬಯಾಲಜಿ

ಜೀವವಿಜ್ಞಾನ, ಜೀವರಸಾಯನಶಾಸ್ತ್ರಗಳಲ್ಲಿ ವಿಶೇಷ ಅಧ್ಯಯನ ಮತ್ತು ಸಂಶೋಧನೆ ಮಾಡಿ ಹಲವು

ಸಾಧನೆಗಳನ್ನು ದಾಖಲಿಸಿದ್ದ ಇವರು, ಕನ್ನಡ ಸಾಹಿತ್ಯ, ಗ್ರಾಮೀಣ ಕಲೆಗಳು ಮತ್ತು ಜನಸೇವೆಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ವಾಷಿಂಗ್‌ಟನ್ ನಗರದಲ್ಲಿ ಕನ್ನಡಿಗರನ್ನು ಒಟ್ಟುಗೂಡಿಸಿ, ಕಾವೇರಿ ಎಂಬ ಕನ್ನಡ ಸಂಘದ ಅಧ್ಯಕ್ಷರಾಗಿದ್ದರು. ಭಾರತದಿಂದ ಅಮೇರಿಕಾಕ್ಕೆ ಬಂದ ಗಣ್ಯರನ್ನು ಈ ಸಂಘದ ಮೂಲಕ ಪರಿಚಯಿಸಿ, ಈ ಪ್ರತಿಭಾವಂತರಿಂದ ಉಪನ್ಯಾಸ ಕೊಡಿಸುತ್ತಿದ್ದರು. ಕರ್ನಾಟಕದಿಂದ ಅಮೇರಿಕಾಕ್ಕೆ ಹೋದ ಮಹಾರಾಷ್ಟ್ರದ ಈಗಿನ ರಾಜ್ಯಪಾಲರಾದ ಎಸ್.ಎಂ.ಕೃಷ್ಣ, ಎಸ್.ಶಿವಪ್ಪ ಮೊದಲಾದ ಹಲವಾರು ರಾಜಕಾರಣಿಗಳು, ದೇ.ಜವರೇಗೌಡ, ಗಿರೀಶ್ ಕಾರ್ನಾಡ್ ಮೊದಲಾದ ಸಾಹಿತಿಗಳು, ಡಾ॥ ರಾಜ್‌ಕುಮಾರ್ ಮೊದಲಾದ ಕಲಾವಿದರು, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಮೊದಲಾದ ಮಠಾಧೀಶರು ಇವರ ಮನೆಯಲ್ಲೇ ವಾಸ್ತವ್ಯ ಮಾಡಿ ಸತ್ಕಾರ ಸ್ವೀಕರಿಸುತ್ತಿದ್ದರು.

ಲವಪ್ಪನವರು ಊರಿಗೆ ಬಂದಾಗಲೆಲ್ಲಾ ತಮ್ಮ ಜೊತೆಯಲ್ಲಿ ಪ್ರೊಜೆಕ್ಟರ್ ಮತ್ತು ಕ್ಯಾಸೆಟ್‌ಗಳನ್ನು ತಂದು ಅಮೇರಿಕಾದ ಸುಂದರ ಕಟ್ಟಡಗಳು, ನದಿಗಳು, ಜಲಪಾತಗಳು, ಕಾಡುಗಳು, ಮೊದಲಾದ ಛಾಯಾಚಿತ್ರಗಳನ್ನು

ತೋರಿಸುತ್ತಿದ್ದರು ಹಾಗೂ ಅಮೇರಿಕಾದ ಜೀವನ ಶೈಲಿ, ಸಂಸ್ಕೃತಿ, ಪರಿಶ್ರಮದ ದುಡಿಮೆಗಳ ಬಗ್ಗೆ ತಿಳಿ ಹೇಳುತ್ತಿದ್ದರು. ಕಾಂತರಾಜಪುರ ಮತ್ತು ಸುತ್ತಮುತ್ತಲ ಗ್ರಾಮಗಳ ಗ್ರಾಮೀಣ ಕಲೆಗಳಾದ ಸುಗ್ಗಿಯ ಕುಣಿತ, ಕೋಲಾಟ ಮತ್ತು ಪೌರಾಣಿಕ ನಾಟಕಗಳನ್ನು ಚಿತ್ರೀಕರಣ ಮಾಡಿಕೊಂಡು ಅಮೇರಿಕಾದ ಜನತೆಗೆ ನಮ್ಮ ಜನಪದ ಕಲೆಗಳನ್ನು ಪರಿಚಯಿಸುತ್ತಿದ್ದರು. ಇವರು ಭಾರತಕ್ಕೆ ಬಂದಾಗ ಬೆಂಗಳೂರು, ಹಾಸನ, ಚನ್ನರಾಯಪಟ್ಟಣ, ಶ್ರವಣಬೆಳಗೊಳಗಳಲ್ಲಿ ಶಿಕ್ಷಣ ಇಲಾಖೆ ಮತ್ತು ವಿವಿಧ ಸಂಘ ಸಂಸ್ಥೆಗಳು ಏರ್ಪಡಿಸುತ್ತಿದ್ದ ಸಮಾರಂಭಗಳಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದರು.

ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂಬ ಕಳಕಳಿವುಳ್ಳವರಾಗಿದ್ದ ಇವರು ಮೈಸೂರಿನ ಕೆ.ಹೆಚ್.ರಾಮಯ್ಯ ವಿದ್ಯಾರ್ಥಿ ನಿಲಯಕ್ಕೆ ಉದಾರ ದೇಣಿಗೆ ನೀಡಿ, ಪ್ರತೀ ವರ್ಷ ನಮ್ಮ ಜಿಲ್ಲೆಯ ಒಬ್ಬ ಬಡ ಪ್ರತಿಭಾವಂತ ವಿದ್ಯಾರ್ಥಿಗೆ ಉಚಿತ ಪ್ರವೇಶ ದೊರಕಿಸಿಕೊಟ್ಟಿದ್ದರು. ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಉದಾರ ದೇಣಿಗೆ ನೀಡಿದ್ದರು. ತಮ್ಮ ತಂದೆ ತಾಯಿಗಳ ಹೆಸರಿನಲ್ಲಿ ನಿಧಿ ಸ್ಥಾಪಿಸಿ, ಕಾಂತರಾಜಪುರದ ಪ್ರೌಢಶಾಲೆಯಲ್ಲಿ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನದ ಏರ್ಪಾಟು ಮಾಡಿದ್ದರು. ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುವ ಬಡ ವಿದ್ಯಾರ್ಥಿಗಳಿಗೆ, ಶ್ರವಣಬೆಳಗೊಳದ ಮಠದ ಬೀದಿಯಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯ ಬಡಮಕ್ಕಳಿಗೆ ಪ್ರೋತ್ಸಾಹ ಧನ ನೀಡಲು ದೇಣಿಗೆ ನೀಡಿದ್ದಾರೆ. ಒಟ್ಟಿನಲ್ಲಿ ಅವರೊಬ್ಬ ಮಾನವತಾವಾದಿಗಳಾಗಿದ್ದರು.

ಲವಪ್ಪನವರು ತಮ್ಮ ಸಂಶೋಧನಾ ಕ್ಷೇತ್ರ ಮತ್ತು ಜನಸೇವೆಯ ಕಾರ್ಯದಲ್ಲಿ ಪ್ರಗತಿ ಸಾಧಿಸುತ್ತಿರುವಾಗಲೇ ದಿನಾಂಕ: 23-3-1988 ರಲ್ಲಿ ಅಮೇರಿಕಾದಲ್ಲಿ ಕಾರು ಅಪಘಾತದಲ್ಲಿ ಅಕಾಲ ಮರಣಕ್ಕೆ ತುತ್ತಾದರು. ಇವರ ಈ ಅಕಾಲ ಮರಣಕ್ಕೆ ನಾಡಿನ ಗಣ್ಯರು, ಹಿತೈಷಿಗಳು, ಅಭಿಮಾನಿಗಳು, ಸ್ನೇಹಿತರು, ಕಾಂತರಾಜಪುರ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಶೋಕತಪ್ತರಾಗಿ ಸಂತಾಪ ಸೂಚಿಸಿದರು.

ಇವರ ನಿಧನಾನಂತರ ಕುಟುಂಬ ವರ್ಗದವರು, ಹಿತೈಷಿಗಳು, ಸ್ನೇಹಿತರು ದೊಡ್ಡ ನಿಧಿಯನ್ನು ಸಂಗ್ರಹಿಸಿ ಇವರ ಹೆಸರಿನಲ್ಲಿ ಕಾಂತರಾಜಪುರ ಎಸ್.ಲವಪ್ಪ ಮೆಮೋರಿಯಲ್ ಟ್ರಸ್ಟ್ ಒಂದನ್ನು ಸ್ಥಾಪಿಸಿ, ಊರಿನ ಎಲ್ಲಾ ಶಾಲೆಗಳ ಬಡ ಮತ್ತು ಪ್ರತಿಭಾವಂತ ಮಕ್ಕಳಿಗೆ ನಗದು ವಿದ್ಯಾರ್ಥಿ ವೇತನ, ಶಾಲಾ ಸಮವಸ್ತ್ರ, ಪುಸ್ತಕಗಳು ಹಾಗೂ ಪಾಠೋಪಕರಣಗಳನ್ನು ನೀಡುವುದು, ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ, ಚರ್ಚಾಸ್ಪರ್ಧೆಗಳನ್ನು ಏರ್ಪಡಿಸುವುದು, ಶಾಲೆಗಳಿಗೆ ಮೂಲಭೂತ ಸೌಲಭ್ಯಗಲನ್ನು ಒದಗಿಸುವುದು ಇವೇ ಮೊದಲಾದ ಕಾರ್ಯಗಳನ್ನು ಪ್ರತೀ ವರ್ಷವೂ ಊರಿನ ಹಬ್ಬದೋಪಾದಿಯಲ್ಲಿ ನಡೆಸಿಕೊಂಡು ಬಂದು ಇವರ ಹೆಸರನ್ನು ಚಿರಸ್ಥಾಯಿಗೊಳಿಸಲಾಗುತ್ತಿದೆ.

ಇವರ ಮೊದಲನೇ ಮಗಳು ಮಾಲಾಲವಪ್ಪ ಅಮೇರಿಕಾದ ವಾಷಿಂಗ್‌ಟನ್‌ನಲ್ಲಿ ಕಾನೂನು ಪದವಿ ಪಡೆದು ಅಲ್ಲಿನ ಸರ್ಕಾರದಲ್ಲಿ ಉದ್ಯೋಗದಲ್ಲಿದ್ದಾರೆ. ಎರಡನೇ ಮಗಳು ಪ್ರಿಯಾಲವಪ್ಪನವರು ಅಮೇರಿಕಾದ ವಾಷಿಂಗ್‌ಟನ್‌ನಲ್ಲಿ ತಾಂತ್ರಿಕ ಪದವಿ ಮುಗಿಸಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಉದ್ಯೋಗದಲ್ಲಿದ್ದಾರೆ.